# ಗುಲಬರ್ಗಾ ವಿಶ್ವವಿದ್ಯಾಲಯ

## ರಾಷ್ಟ್ರೀಯ ಸೇವಾ ಯೋಜನೆ

ಜ್ಞಾನ ಗಂಗಾ, ಗುಲಬರ್ಗಾ – 585 106

08472–245971 (ಕ); 9449122405 (ನಿ)


**"ವಿಜ್ಞಾನ ಮತ್ತು ವೈಜ್ಞಾನಿಕ ಮನೋಭಾವನೆ – ಯುವಕರ ಪಾತ್ರ"**

ಸಂ.ಗುವಿಗು/ರಾಸೇಯೋ/ಅನುದಾನ/2014–15/ ದಿನಾಂಕ: 08.03.2016

ಗೆ

ಪ್ರಾಚಾರ್ಯರು,
ಸಂಬಂಧಪಟ್ಟ ರಾಸೇಯೋ ಮಹಾವಿದ್ಯಾಲಯಗಳಿಗೆ

ವಿಷಯ: 2015–16ನೇ ಸಾಲಿನ ವಿಶೇಷ ಶಿಬಿರದ ಅನುದಾನ ಬಿಡುಗಡೆ ಮಾಡುವ ಕುರಿತು.

ಮಾನ್ಯರೆ,

ಮಾನ್ಯ ಕುಲಪತಿಗಳ ಆದೇಶದ ಮೇರೆಗೆ, ತಮ್ಮ ಮಹಾವಿದ್ಯಾಲಯದ ರಾಸೇಯೋ ಘಟಕದ ವಿಶೇಷ ಶಿಬಿರದ ಪ್ರಸ್ತಾವನೆಯನ್ನು ಅಂಗೀಕರಿಸಿ, ನಿಯಮಾವಳಿಗಳ ಪ್ರಕಾರ ಪ್ರತಿ ವಿದ್ಯಾರ್ಥಿಗೆ ರೂ. 450.00 ರಂತೆ ರೂ. 22,500.00 / ರೂ. 11,250.00 ರಂತೆ ವಿಶೇಷ ಶಿಬಿರದ ಅನುದಾನ ಆನ್‌ಲೈನ ಮುಖಾಂತರ ದಿನಾಂಕ 01.03.2016 ರಂದು ತಾವು ಕೊಟ್ಟಿರುವಂತೆ ಬ್ಯಾಂಕ ಖಾತೆಗಳ ಸಂಖ್ಯೆಗೆ ಜಮಮಾಡಲಾಗಿದೆ. ದಯವಿಟ್ಟು ಸ್ವೀಕೃತಿಯಾದ ಬಗ್ಗೆ ತಿಳಿಸಬೇಕು.

ವಿಶೇಷ ಶಿಬಿರದ ಕಾರ್ಯಕ್ರಮ ಕುರಿತು ಈ ಕೆಳಗಿನ ಅಂಶಗಳನ್ನು ಪಾಲಿಸಬೇಕು:

1. ವಿಶೇಷ ಶಿಬಿರವನ್ನು ದತ್ತು ಸ್ವೀಕಾರ ಮಾಡಿದ ಗ್ರಾಮ/ಕೇರಿಗಳಲ್ಲಿಯೇ ನಡೆಯಿಸಬೇಕು. ಈ ಸಾಲಿನ ವಿಶೇಷ ಶಿಬಿರದ ಧೇಯವಾಖ್ಯ **"Youth for Science and Scientific Attitude" "ವಿಜ್ಞಾನ ಮತ್ತು ವೈಜ್ಞಾನಿಕ ಮನೋಭಾವ – ಯುವಕರ ಪಾತ್ರ"** ಇದನ್ನು ಮುಖ್ಯ ಬ್ಯಾನರ ಕೆಳಗೆ ಬರೆಯಿಸಬೇಕು. ಈ ಧೇಯವಾಖ್ಯದ ಉದ್ದೇಶಕ್ಕೆ ತಕ್ಕಂತೆ ಕಾರ್ಯ ಯೋಜನೆಗಳನ್ನು ಹಮ್ಮಿಕೊಳ್ಳಬೇಕು.

2. ಉಪನ್ಯಾಸ ಕಾರ್ಯಕ್ರಮಗಳಲ್ಲಿ ಸ್ವಚ್ಚತೆ, ಪರಿಸರ, ಆರೋಗ್ಯ, ಏಡ್ಸ್, ರಕ್ತದಾನ, ನೀರಿನ ಹಾಗೂ ವಿದ್ಯುತ್ ಶಕ್ತಿಯ ಸದುಪಯೋಗ ಮುಂತಾದವುಗಳ ಕುರಿತು ತಜ್ಞರಿಂದ ಉಪನ್ಯಾಸಗಳನ್ನು ಏರ್ಪಡಿಸಬೇಕು.

Contd.

3. ಆವ್ಹಾನ ಪತ್ರಿಕೆಗಳನ್ನು ಮುದ್ರಿಸುವಾಗ ಗುಲಬರ್ಗಾ ವಿಶ್ವವಿದ್ಯಾಲಯದ ಹೆಸರು, ರಾ.ಸೇ.ಯೋ ಲಾಂಛನ, ದಿನಚರಿ ಇತ್ಯಾದಿ ವಿವರಗಳನ್ನು ಮುದ್ರಣ ಮಾಡಿಸಬೇಕು. ಶಿಬಿರಕ್ಕೆ ರೈಲು ಬಸ್ಸು ನಿಲ್ದಾಣದಿಂದ ಬರುವ ಅಂದಾಜು ಮಾರ್ಗ ನಕ್ಷೆಯನ್ನು ಹಾಕಿಸಬೇಕು.

4. ಶಿಬಿರಕ್ಕೆ ಸಂದರ್ಶಿಸುವ ಅಧಿಕಾರಿಗಳ ಹೆಸರನ್ನು ಈ ಕೆಳಗಿನಂತೆ ಹಾಕಿಸಬೇಕು:

| | |
|---|---|
| 1. **ಡಾ. ಗಣನಾಥ ಶೆಟ್ಟಿ**<br>ರಾಜ್ಯಸಂಪರ್ಕಾಧಿಕಾರಿಗಳು<br>ರಾ.ಸೇ.ಯೋ. ಕೋಶ<br>ಕರ್ನಾಟಕ ಸರಕಾರ, ಬೆಂಗಳೂರ | **2. ಶ್ರೀ ಎ.ಎನ್. ಪೂಜಾರ**<br>ಪ್ರಾದೇಶಿಕ ನಿರ್ದೇಶಕರು<br>ರಾ.ಸೇ.ಯೋ. ಪ್ರಾದೇಶಿಕ ಕೇಂದ್ರ<br>ಭಾರತ ಸರಕಾರ, ಬೆಂಗಳೂರು |
| **3. ಡಾ. ಜಿ. ಶ್ರೀರಾಮುಲು**<br>ರಾ.ಸೇ.ಯೋ. ಕಾರ್ಯಕ್ರಮ ಸಂಯೋಜಕರು<br>ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ | |

5. ಶಿಬಿರದ ಅನುದಾನದ ವೆಚ್ಚದ ಹಂಚಿಕೆ ಈ ಕೆಳಗಿನಂತಿರಬೇಕು:

| ಕ್ರ.ಸಂ. | ಬಾಬತ್ತು | ಪ್ರತಿ ವಿದ್ಯಾರ್ಥಿಗೆ | ಒಟ್ಟು ವಿದ್ಯಾರ್ಥಿಗೆ ಒಟ್ಟು ದಿನಗಳು | |
|---|---|---|---|---|
| 1. | ಆಹಾರ | ರೂ.50.00 | X50 X7 | 17,500.00 |
| 2. | ಕಾಂಟಿಜೆನ್ಸಿ (ಮೈಕ, ಆಮಂತ್ರಣ ಪತ್ರಿಕೆ, ಡೈರಿ, ಪೋಟೂ, ಬ್ಯಾನರ ಇತ್ಯಾದಿ | ರೂ.08.29 | X50 X7 | 2,900.00 |
| 3. | ಸಾರಿಗೆ ವೆಚ್ಚ | ರೂ.04.00 | X50 X7 | 1,400.00 |
| 4. | ಸಲಕರಣೆ ಖರೀದಿ ಹಾಗೂ ರಿಪೇರಿ ವೆಚ್ಚ | ರೂ.02.00 | X50 X7 | 700.00 |
| | **ಒಟ್ಟು** | ರೂ 64.29 | X50 X7 | 22,500.00 |

6. ಶಿಬಿರ ಮುಗಿದ ಕೂಡಲೇ, 15 ದಿನದೊಳಗಾಗಿ ಎಲ್ಲ ವರದಿಗಳೊಂದಿಗೆ ಫೊಟೊ, ಪೇಪರ್ ಕ್ಲಿಪಿಂಗ್ಸ್, ವಿಶ್ವವಿದ್ಯಾಲಯಕ್ಕೆ ಕಳುಹಿಸಿಕೊಡಬೇಕು.

7. ಶಿಬಿರದಲ್ಲಿ ವಿದ್ಯಾರ್ಥಿಗಳ ಹಾಜರಾತಿ ಪುಸ್ತಕ, ಕಾರ್ಯಯೋಜನೆ ರಜಿಸ್ಟರ್ ಮತ್ತು ಸಂದರ್ಶಕರ ಪುಸ್ತಕ ಇತ್ಯಾದಿಗಳನ್ನು ಇಟ್ಟಿಕೊಂಡಿರಬೇಕು.

8. ಆಮಂತ್ರಣ ಪತ್ರಿಕೆಗಳನ್ನು ಅಧಿಕಾರಿಗಳಿಗೆ ಸಾಕಷ್ಟು ಮುಂಚೆಯೇ ಕಳುಹಿಸಿಕೊಡಬೇಕು.

ಈ ವಿವರಗಳಿಗೆ ಅನುಗುಣವಾಗಿ ಅಂತ್ಯದಲ್ಲಿ ಚಾರ್ಟೆಡ್ ಅಕೌಂಟಂಟ್ಸ್ (Chartered Accountants) ರಿಂದ ಅಡಿಟ್ ಮಾಡಿಸಿ ಮೂಲ ಓಚರಗಳೊಂದಿಗೆ ದಿನಾಂಕ **15.04.2016** ರ ಒಳಗಾಗಿ ಈ ಕಛೇರಿಗೆ ಸಲ್ಲಿಸಬೇಕು.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,



**ಡಾ. ಜಿ. ಶ್ರೀರಾಮುಲು**
ರಾ.ಸೇ.ಯೋ. ಕಾರ್ಯಕ್ರಮ ಸಂಯೋಜಕರು